5 MAR 2019

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ಗ್ರಾಮಾಂತರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-236255,
ಮೊಬೈಲ್: 9448994850
ಫ್ಯಾಕ್ಸ್: 08232-233600
ಇ-ಮೇಲ್: aeemdr2@rediffmail.com

ಕ್ರಮಾಂಕ: ಸ.ಕಾ.ನಿ.ಇಂ(ವಿ)/ಸಇಂ(ತಾಂ)/ಗ್ರಾ.ಉ.ವಿ/ಮದ್ದೂರು/2018-19/3223-28 ದಿನಾಂಕ: 01 MAR 2019

## ಜನಸಂಪರ್ಕ ಸಭಾ ನಡಾವಳಿ

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ: 22.02.2019 ರಂದು ಮಧ್ಯಾಹ್ನ 2.30 ಗಂಟೆಗೆ ಜರುಗಿದ ಗ್ರಾಮಾಂತರ ಉಪವಿಭಾಗದ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂದಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಕಾಇಂ(ವಿ) | ಮದ್ದೂರು ವಿಭಾಗ, ಮದ್ದೂರು |
| 2 | ಶ್ರೀ ರಾಜೇಂದ್ರ | ಸಕಾಇಂ(ವಿ) | ಮದ್ದೂರು ಉಪವಿಭಾಗ-1 |
| 3 | ಶ್ರೀ ಮೋಹನ್ ಜಿ | ಸಕಾಇಂ(ವಿ) | ಮದ್ದೂರು ಉಪವಿಭಾಗ-2 |
| 4 | ಶ್ರೀ ನಾಗರಾಜು | ಸಹಾಯಕ ಲೆಕ್ಕಾಧಿಕಾರಿ | ವಿಭಾಗೀಯ ಕಛೇರಿ, ಮದ್ದೂರು |
| 5 | ಶ್ರೀ ತೇಜ್ ಪ್ರಕಾಶ್ | ಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 6 | ಶ್ರೀ ನಾಗೇಶ್ | ಕಿಇಂ(ವಿ) | ಕೆಸ್ತೂರು ಶಾಖೆ |
| 7 | ಶ್ರೀ ಸಂತೋಷ್ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 8 | ಶ್ರೀ ಶಿವರಾಜು | ಪ್ರಕಿಇಂ(ವಿ) | ಕೌಡ್ಲೆ ಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ಸಾರ್ವಜನಿಕರುಗಳನ್ನು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಿಯಿಸಿ ಉತ್ತರಿಸಿದರು.

F-38

Scanned by CamScanner

| ಕ್ರಮ ಸಂಖ್ಯೆ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | **ಗ್ರಾಹಕರು –ಶ್ರೀಮತಿ ರತ್ನಮ್ಮ ಕೋಂ ಬಲರಾಮ ತೊರೆಶೆಟ್ಟಹಳ್ಳಿ ಗ್ರಾಮ** | |
| 1 | ಗ್ರಾಹಕರು ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಜೇಷ್ಠತಾ ಪಟ್ಟಿಯನುಸಾರ ಮುಂದಿನ ದಿನಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.. |
| | **ಗ್ರಾಹಕರು – ಶ್ರೀ ಎಂ.ಎನ್.ಕಾಮರಾಜು , ಬೆಸಗರಹಳ್ಳಿ ಅಡ್ಡರಸ್ತೆ** | |
| 2 | ನಮ್ಮ ವಾಣಿಜ್ಯ ಮಳಿಗೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕಾರ್ಯಾದೇಶ ದೊರೆತು 1 ವರ್ಷವೇ ಕಳೆದಿದೆ. ದಯಮಾಡಿ ಕಾಮಗಾರಿ ನಿರ್ವಹಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರಿಗೆ ತಿಳಿಸಿ ಸಂಬಂಧಪಟ್ಟ ಗುತ್ತಿಗೆದಾರರಿಂದ ಆದಷ್ಟು ಬೇಗನೆ ಕೆಲಸ ಮಾಡಿಸುವಂತೆ ತಿಳಿಸಿದರು. |
| | **ಗ್ರಾಹಕರು– ಶ್ರೀ ರಾಜೇಶ್ ವಳಗೆರೆದೊಡ್ಡಿ ಗ್ರಾಮ 9243976546** | |
| 3 | ಊರಿನ ಒಳಗಿರುವ ವಿದ್ಯುತ್ ಕಂಬ ಶಿಥಿಲಗೊಂಡಿದೆ. ದಯಮಾಡಿ ಬದಲಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಕಿರಿಯ ಇಂಜಿನಿಯರ್(ವಿ) ಕೆಸ್ತೂರು ರವರಿಗೆ ಸೂಚಿಸಿ 3 ದಿನಗಳ ಒಳಗೆ ವಿದ್ಯುತ್ ಕಂಬ ಬದಲಿಸುವಂತೆ ಸೂಚಿಸಿದರು. |
| | **ಗ್ರಾಹಕರು– ಶ್ರೀ ಎನ್.ಹೆ.ಶಿವಣ್ಣ, ನೀಲಕಂಠನಹಳ್ಳಿ** | |
| 4 | ಗ್ರಾಹಕರು ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಜೇಷ್ಠತಾ ಪಟ್ಟಿಯನುಸಾರ ಮುಂದಿನ ದಿನಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| | **ಗ್ರಾಹಕರು– ಶ್ರೀ ಚಂದ್ರಶೇಖರ್, ಬೂದುಗುಪ್ಪೆ 9880172417** | |
| 5 | ನಮ್ಮ ಐಪಿ ಸೆಟ್‌ಗೆ ವಿದ್ಯುತ್ ಲೈನ್ ಬಂದಿರುವ ಮಾರ್ಗದಲ್ಲಿ ಮರ-ಗಿಡಗಳು ಬೆಳೆದು ವಿದ್ಯುತ್ ತಂತಿಗೆ ತಗುಲಿ ಸಮರ್ಪಕ ವಿದ್ಯುತ್ ಪೂರೈಕೆಯಾಗುತ್ತಿಲ್ಲ ಎಂದು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಕಿರಿಯ ಇಂಜಿನಿಯರ್ ತೇಜ್ ಪ್ರಕಾಶ್‌ರವರಿಗೆ ತಿಳಿಸಿ ಜಂಗಲ್ ಕಟಿಂಗ್ ಮಾಡಿಸಿ ಐಪಿ ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗುವಂತೆ ನಿಗಾ ವಹಿಸಲು ಸೂಚಿಸಿದರು. |
| | **ಗ್ರಾಹಕರು– ವಳಗೆರೆದೊಡ್ಡಿ ಗ್ರಾಮಸ್ಥರು** | |
| 6 | ನಮ್ಮ ಗ್ರಾಮದ 25 ಕೆವಿಎ ಹೆಚ್ಚುವರಿ ಪರಿವರ್ತಕ (ಎನ್-1533/19.08.2009) ಮಂಜೂರು ಆಗಿ ಇಲ್ಲಿಗೇ 10 ವರ್ಷವೇ ಕಳೆದಿದೆ. ಇಲ್ಲಿಯವರೆವಿಗೂ ಪರಿವರ್ತಕ ಅಳವಡಿಸಿಲ್ಲ. ವಿದ್ಯುತ್ ಕಂಬ & ವಿದ್ಯುತ್ ತಂತಿ ಎಳೆದು ಹೋಗಿದ್ದಾರೆ. ದಯಮಾಡಿ ಪರಿವರ್ತಕ ಅಳವಡಿಸಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಕಿರಿಯ ಇಂಜಿನಿಯರ್ ನಾಗೇಶ್‌ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಪರಿವರ್ತಕ ಅಳವಡಿಸಲು ಜರಾರಾಗಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |

Scanned by CamScanner

<table>
<tr><td colspan="3">ಗ್ರಾಹಕರು- ಶ್ರೀ ವಿಜಯ ಮಹಾಲಿಂಗ, ಬೂದುಗುಪ್ಪೆ ಗ್ರಾಮ 9964659898</td></tr>
<tr><td>7</td><td>ಸದರಿ ಗ್ರಾಹಕರು ನಮ್ಮ ರೇಷ್ಮೆ ಸಾಕಾಣಿಕಾ ಮನೆಯ ಮೇಲೆ ವಿದ್ಯುತ್ ಲೈನ್ ಹಾದು ಹೋಗಿದ್ದು, ಅದನ್ನು ಸ್ಥಳಾಂತರಿಸಿಕೊಡಬೇಕೆಂದು ಕೋರಿದರು.</td><td>ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಕಿರಿಯ ಇಂಜಿನಿಯರ್ ತೇಜ್ ಪ್ರಕಾಶ್‌ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ಶಂಕರ್, ತೊರೆಶೆಟ್ಟಹಳ್ಳಿ 9902911623</td></tr>
<tr><td>8</td><td>ಗ್ರಾಹಕರು ಅಕ್ರಮ-ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಎಲ್‌ಟಿ ಲೈನ್ ಅಳವಡಿಸಿಕೊಡಿ ಕೋರಿದರು.</td><td>ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿ ಜೇಷ್ಠತಾ ಪಟ್ಟಿಯನುಸಾರ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮ ಕೈಗೊಳ್ಳಬಹುದೆಂದು ತಿಳಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ಕೆ.ಬೆಳ್ಳೂರು ಗ್ರಾಮಸ್ಥರು</td></tr>
<tr><td>9</td><td>ಸದರಿ ಗ್ರಾಮದ ಗ್ರಾಹಕರು ನಮ್ಮ ಐಪಿ ಸೆಟ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಮಸ್ಯೆ ಬಗೆಹರಿಸುವ ಸಲುವಾಗಿ ಈ ಹಿಂದೆ ಲಿಂಕ್ ಲೈನ್ ಅಂದಾಜು ಪಟ್ಟಿ ಸಲ್ಲಿಸಲಾಗಿದ್ದು, ಕಾಮಗಾರಿ ಪೂರ್ಣಗೊಂಡಿಲ್ಲವೆಂದು ತಿಳಿಸಿದರು.</td><td>ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸದರಿ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದ್ದು, ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಅದೂ ಅಲ್ಲದೇ ಸೋಮನಹಳ್ಳಿ ಗ್ರಾಮದ ಬಳಿ ಹೊಸದಾಗಿ 66/11ಕೆವಿ ಎಂಯುಎಸ್‌ಎಸ್ ಸ್ಥಾಪನೆಯಾಗಲಿದ್ದು, ಜರೂರಾಗಿ ನಿಮ್ಮ ಎಲ್ಲಾ ವಿದ್ಯುತ್ ಸಮಸ್ಯೆಗೆ ಪರಿಹಾರ ದೊರೆಯಲಿದೆ ಎಂದು ತಿಳಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ಯೋಗೇಶ್, ಹೊಸಕೆರೆ 9964347124</td></tr>
<tr><td>10</td><td>ಸದರಿ ಗ್ರಾಹಕರು ನಮ್ಮ ಐಪಿ ಸೆಟ್‌ಗೆ ಅಕ್ರಮ-ಸಕ್ರಮ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯನ್ನು ಪೂರ್ಣಗೊಳಿಸದೆ ಅರ್ಧಕ್ಕೆ ನಿಲ್ಲಿಸಿದ್ದಾರೆ. ಇದರಿಂದಾಗಿ ಬೇಸಾಯ ಮಾಡಲು ಆಗದೆ ಬೆಳೆಗಳಿಗೆ ನೀರು ಹಾಯಿಸಲು ಆಗದೆ ತುಂಬಾ ತೊಂದರೆಯಾಗಿದೆ. ಕಾಮಗಾರಿಯನ್ನು ಜರೂರಾಗಿ ಪೂರ್ಣಗೊಳಿಸಿಕೊಡಿ ಎಂದು ಕೋರಿದರು.</td><td>ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ರವರು ಅಕ್ರಮ-ಸಕ್ರಮ ಯೋಜನೆಯ ಗುತ್ತಿಗೆದಾರರಿಗೆ ಮೊಬೈಲ್ ಮೂಲಕ ಮಾತನಾಡಿ ಒಂದು ವಾರದೊಳಗೆ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿಕೊಡುವಂತೆ ಸೂಚಿಸಿದರು.</td></tr>
<tr><td colspan="3">ಗ್ರಾಹಕರು- ಶ್ರೀ ಪ್ರವೀಣ್, ವಿ.ಬಳ್ಳೇಕೆರೆ - 9663714828</td></tr>
<tr><td>11</td><td>ನಮ್ಮ ಐಪಿ ಸೆಟ್‌ಗೆ ಸಮರ್ಪಕ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಆದ್ದರಿಂದ ಹೆಚ್ಚುವರಿ ಪರಿವರ್ತಕ ಅಳವಡಿಸುವ ಅಂದಾಜು ಪಟ್ಟಿಯನ್ನು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದ್ದು, ಮಂಜೂರು ಮಾಡಿಕೊಡಿ ಎಂದು ಕೋರಿದರು.</td><td>ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸದರಿ ಗ್ರಾಹಕರಿಗೆ ತಿಳಿಸಿ ಹೇಳುತ್ತಾ ನಿಮ್ಮ ಅಂದಾಜು ಪಟ್ಟಿಯ ಮೊತ್ತ 5 ಲಕ್ಷ ಮೀರಿರುವುದರಿಂದ ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಅಲ್ಲಿಂದ ಅನುಮೋದನೆ ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.</td></tr>
</table>

Scanned by CamScanner

| | | |
|---|---|---|
| **ಗ್ರಾಹಕರು– ಶ್ರೀ ನಾರಾಯಣ, ಕೋಡಿನಾಗನಹಳ್ಳಿ 9880987153** | | |
| 12 | ಗ್ರಾಹಕರು ಅಕ್ರಮ–ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಕಿರಿಯ ಇಂಜಿನಿಯರ್ ಶಿವರಾಜ್‌ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. |
| **ಗ್ರಾಹಕರು– ಶ್ರೀ ಶಂಕರೇಗೌಡ, ಯರಗನಹಳ್ಳಿ 8792170894** | | |
| 13 | ಗ್ರಾಹಕರು ಅಕ್ರಮ–ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಒದಗಿಸಿಕೊಡಬೇಕೆಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಕಿರಿಯ ಇಂಜಿನಿಯರ್ ನಾಗೇಶ್ ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸುವಂತೆ ಸೂಚಿಸಿದರು. |
| **ಗ್ರಾಹಕರು– ಶ್ರೀ ರಾಮಣ್ಣ, ಸಿದ್ದೇಗೌಡನದೊಡ್ಡಿ** | | |
| 14 | ಗ್ರಾಹಕರು ಅಕ್ರಮ–ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಐಪಿ ಸ್ಥಾವರಕ್ಕೆ ಮೂಲಭೂತ ಸೌಕರ್ಯ ಕಲ್ಪಿಸಲು ಈಗಾಗಲೇ ಅಂದಾಜು ಪಟ್ಟಿಯನ್ನು ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ. ದಯಮಾಡಿ ಮಂಜೂರಾತಿ ಮಾಡಿಕೊಡಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಮುಂದಿನ ದಿನಗಳಲ್ಲಿ ಅಕ್ರಮ–ಸಕ್ರಮ ಯೋಜನೆಯಡಿಯ ಫಲಾನುಭವಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನ ದೊರೆಯಲಿದ್ದು, ಮೇಲಾಧಿಕಾರಿಗಳ ಜೊತೆ ಚರ್ಚಿಸಿ ಜರೂರಾಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಶಾಖಾಧಿಕಾರಿಗಳನ್ನು ಕುರಿತು ದಿನೇ ದಿನೇ ಬೇಸಿಗೆ ಹೆಚ್ಚಾಗುತ್ತಿದ್ದು, ವಿದ್ಯುತ್ ಸಮಸ್ಯೆಯೂ ಕೂಡ ಹೆಚ್ಚಾಗುತ್ತಿದೆ. ಮರ/ಗಿಡಗಳು ಬೆಳೆದು ವಿದ್ಯುತ್ ತಂತಿಗೆ ತಗುಲುತ್ತಿರುವ ಕಡೆ ಜಂಗಲ್ ಕಟಿಂಗ್ ಮಾಡಿಸಿ ಸಮರ್ಪಕ ವಿದ್ಯುತ್ ಕೊಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಅಲ್ಲದೇ ಪರಿವರ್ತಕಗಳಿಗೆ ಅಗತ್ಯವಿರುವ ಡಿಒಎಲ್‌ಒ, ಎಲ್‌ಟಿ ಕಿಟ್ ಇನ್ನಿತರೇ ವಿದ್ಯುತ್ ಸಂಬಂಧಿತ ಸಾಧನಗಳು ವಿಭಾಗೀಯ ಉಗ್ರಾಣದಲ್ಲಿ ಲಭ್ಯವಿದ್ದು, ಅವುಗಳನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಪರಿವರ್ತಕ ವಿಫಲಗೊಂಡರೆ ವಿಭಾಗೀಯ ಉಗ್ರಾಣದಲ್ಲಿ ಪರಿವರ್ತಕಗಳು ಸಾಕಷ್ಟು ಲಭ್ಯವಿದ್ದು, ಜರೂರಾಗಿ ಬದಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಸಾಯಂಕಾಲ 5.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
ಮು.ಕ

Scanned by CamScanner